ಅ) ಆರಂಭದಲ್ಲಿ ನಿಶ್ಚಯವಾಗಿರುವ ಬಡ್ಡಿ: ದರವನ್ನು ಹಾಗೂ ನಿಗಧಿತ ಬೆಲೆಯನ್ನು ಹೆಚ್ಚಿಸಲು ಕಾರಣವೇನು, ಯಾವ ಆಧಾರದಲ್ಲಿ ಹೆಚ್ಚಿಸಲಾಯ್ತು?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು):

ಅ) ಮರಕಡ, ಬೊಂದೇಲದಲ್ಲಿ ಒಟ್ಟು 322 ಮನೆಗಳನ್ನು ನಿರ್ಮಿಸಿದ್ದು, ಹಂಚಿಕೆಯಾದ ನಿವಾಸಿಗಳಿಗೆ ಹುಡ್ಕೋ ಸಂಸ್ಥೆಯ ನಾರ್ಮ್ಸ್ ಪ್ರತಿಗಳನ್ನು ಕೇಳಿದಲ್ಲಿ ಕೊಡಲು ಯಾವ ತೊಂದರೆಯೂ ಇರುವುದಿಲ್ಲ.

ಆ) 1. ಬಡ್ಡಿ ದರವನ್ನು ಹುಡ್ಕೋ ಸಂಸ್ಥೆಯವರು ಕಾಲಕಾಲಕ್ಕೆ ಹೆಚ್ಚಿಸುವಂತೆ ಮಂಡಳಿಯು ಬಡ್ಡಿ ದರವನ್ನು ಹೆಚ್ಚಿಸುವುದು.

2. ಹಂಚಿಕೆ ಸಮಯದಲ್ಲಿ ತಿಳಿಸಲಾಗಿರುವ ಬೆಲೆಯು ತಾತ್ಕಾಲಿಕವಾಗಿ ನಿಗಧಿಪಡಿಸಿದ ಬೆಲೆಯಾಗಿರುತ್ತದೆ.

3. ಅಂತಿಮ ವರದಿಯಲ್ಲಿ ಅಭಿವೃದ್ಧಿ ವೆಚ್ಚಗಳು ಸೇರಿರುವುದರಿಂದ ಮನೆಗಳ ಬೆಲೆಯು ಹೆಚ್ಚಾಗುವುದು.

ಮಂಗಳೂರಿನ ತಾಲ್ಲೂಕು ಮತ್ತು ಜಿಲ್ಲಾಧಿಕಾರಿಗಳ ಕಛೇರಿಗಳ ಸಿಬ್ಬಂದಿ ಕುರಿತು

2845: (3817)

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು): ಮಾನ್ಯ ಕಂದಾಯ ಸಚಿರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರಿನ ತಾಲ್ಲೂಕು ಮತ್ತು ಜಿಲ್ಲಾಧಿಕಾರಿ ಕಛೇರಿಗಳಲ್ಲಿ 5 ವರ್ಷ, 10 ವರ್ಷ 15 ವರ್ಷ, 20 ವರ್ಷ ಮೀರಿ ಎಷ್ಟು ಜನ ಸಿಬ್ಬಂದಿಗಳು ಅಧಿಕಾರಿಗಳು ಮಂಗಳೂರಿನಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ; (ಹೆಸರು ಹಾಗೂ ವರ್ಷವಾರು ವಿವರ ನೀಡುವುದು)

ಆ) ಈ ಮೇಲಿನ ಸಿಬ್ಬಂದಿ ಅಧಿಕಾರಿಗಳಿಗೆ ಸರ್ಕಾರ ವಿಶೇಷ ರಿಯಾಯಿತಿಗಳನ್ನು ತೋರಿಸಲು ಕಾರಣ ಏನು?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು):

ಅ) 1. ಮಂಗಳೂರು ತಾಲ್ಲೂಕು ಕಛೇರಿಯಲ್ಲಿ 5 ವರ್ಷ, 10 ವರ್ಷ, 15 ವರ್ಷ

ಮತ್ತು 20 ವರ್ಷ ಮೀರಿ ಕೆಲಸ ಮಾಡುತ್ತಿರುವ ಸಿಬ್ಬಂದಿಗಳ ಸಂಖ್ಯೆ ಒಟ್ಟು 12. (ವಿವರಗಳನ್ನು ಅನುಬಂಧ- 1 ರಲ್ಲಿ ಲಗತ್ತಿಸಿದೆ)

2. ಮಂಗಳೂರು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ 5, 10, 15 ಮತ್ತು 20 ವರ್ಷ ಮೀರಿ ಕೆಲಸ ಮಾಡುತ್ತಿರುವ ಸಿಬ್ಬಂದಿಗಳ ಸಂಖ್ಯೆ ಒಟ್ಟು 25. (ವಿವರಗಳನ್ನು ಅನುಬಂಧ- 11ರಲ್ಲಿ ಲಗತ್ತಿಸಿದೆ.)

ಆ) ಸರ್ಕಾರದ ನೀತಿಯಂತೆ ಪತಿ-ಪತ್ನಿಯರಿಗೆ ಅಂಗವಿಕಲತೆ ಇರುವವರಿಗೆ, ನೌಕರರ ಸಂಘದ ಪದಾಧಿಕಾರಿಗಳಿಗೆ, ನಿವೃತ್ತಿ ಅಂಚಿನಲ್ಲಿರುವವರಿಗೆ ನೀಡಿದ ವಿಶೇಷ ರಿಯಾಯಿತಿಯಂತೆ ಹಾಗೂ ನೌಕರರ ಸೇವೆಯ ಅಗತ್ಯತೆಗಳನ್ನು ಪರಿಗಣಿಸಿ ಮುಂದುವರಿಸಲಾಗಿದೆ.